# ಕರ್ನಾಟಕ ಸರ್ಕಾರ

ಸಂಖ್ಯೆ:ಡಿಟಿಇ/06/ಆರ್‌ಐಪಿ(1)/2021

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560001,
ದಿನಾಂಕ:18.06.2022.

## ಜ್ಞಾಪನ

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯಡಿ ಮಹಾಲೇಖಪಾಲರ ಲೆಕ್ಕ ತಪಾಸಣೆ ವರದಿಯಡಿ ಬಾಕಿಯಿರುವ ಆಕ್ಷೇಪಣೆಯ ಕಂಡಿಕೆಗಳನ್ನು ತೀರುವಳಿ ಮಾಡುವ ಸಂಬಂಧ ಅಡ್-ಹಾಕ್ ಸಮಿತಿ ಸಭೆಯನ್ನು ಏರ್ಪಡಿಸುವ ಬಗ್ಗೆ.

ಉಲ್ಲೇಖ:
1) ಪ್ರಧಾನ ಮಹಾಲೇಖಪಾಲರು, ಬೆಂಗಳೂರು, ಇವರ ಪತ್ರ ಸಂ: Pr.AG (Audit-I)/ AMG-III/VS-III/A/2021-22/207, ದಿನಾಂಕ: 21/03/2022.
2) ಸರ್ಕಾರದ ಪತ್ರ ಸಂಖ್ಯೆ:ಇಡಿ/29/ಐಎಫ್ ಬಿ/2022, ದಿನಾಂಕ: 01.06.2022.
3) ಈ ಕಛೇರಿ ಪತ್ರಸಂಖ್ಯೆ ಜ್ಞಾಪನ ಪತ್ರ ದಿನಾಂಕ:13.04.2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:31.03.2021ರ ಅಂತ್ಯಕ್ಕೆ ತಾಂತ್ರಿಕ ಶಿಕ್ಷಣ ಇಲಾಖೆಗೆ ಒಳಪಡುವ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಸರ್ಕಾರಿ/ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್‌ಗಳು ಹಾಗೂ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು ಸೇರಿದಂತೆ ಮಹಾಲೇಖಪಾಲರ ಲೆಕ್ಕ ತಪಾಸಣೆಯಡಿ ಬಾಕಿಯಿರುವ ಒಟ್ಟು 1208 ಆಕ್ಷೇಪಣೆಯ ಕಂಡಿಕೆಗಳನ್ನು ತೀರುವಳಿ ಮಾಡುವ ಕುರಿತು ನಿರ್ದೇಶನಾಲಯದ ಹಂತದಲ್ಲಿ ಅಡ್-ಹಾಕ್ ಸಮಿತಿಯನ್ನು ಏರ್ಪಡಿಸಲು ಉದ್ದೇಶಿಸಲಾಗಿ ತಮ್ಮ ಸಂಸ್ಥೆಗೆ ಹಾಗೂ ತಮ್ಮ ವಿಭಾಗಗಳಿಗೆ ಸಂಬಂಧಿಸಿದಂತೆ ಬಾಕಿಯಿರುವ ಕಂಡಿಕೆಗಳಿಗೆ ಸಮಗ್ರವಾದ ಅನುಪಾಲನಾ ವರದಿಯನ್ನು ಸಿದ್ಧಪಡಿಸಿಕೊಳ್ಳಲು ಉಲ್ಲೇಖ(3)ರ ಪತ್ರದಲ್ಲಿ ತಿಳಿಸಲಾಗಿದ್ದು, ಈ ಬಗ್ಗೆ ದಿನಾಂಕ:21.04.2022 ಮತ್ತು 29.04.2022 ರಲ್ಲಿ ವಿಡಿಯೋ ಕಾನ್ಫೆರನ್ಸ್ ಮೂಲಕ ತಮ್ಮೆಲ್ಲರಿಗೂ ತಿಳಿಸಲಾಗಿರುತ್ತದೆ.

.............2

ಮುಂದುವರೆದು, ಉಲ್ಲೇಖ(2)ರ ಸರ್ಕಾರದ ಪತ್ರದಲ್ಲಿ ಸದರಿ ಕಂಡಿಕೆಗಳನ್ನು ತೀರುವಳಿ ಮಾಡುವ ಕುರಿತು ಸರ್ಕಾರದ ಹಂತದಲ್ಲಿ ಅಡ್-ಹಾಕ್ ಸಮಿತಿಯನ್ನು ಏರ್ಪಡಿಸಲು ಉದ್ದೇಶಿಸಿರುವ ಕಾರಣ ಎಲ್ಲಾ ಸಂಸ್ಥೆಗಳಿಂದ ಅನುಪಾಲನಾ ವರದಿಯನ್ನು ಕ್ರೂಢೀಕರಿಸಿ ಸಲ್ಲಿಸಲು ತಿಳಿಸಿರುತ್ತಾರೆ. ನಂತರದಲ್ಲಿ ಅಡ್-ಹಾಕ್ ಸಮಿತಿಯ ಬಗ್ಗೆ ದಿನಾಂಕವನ್ನು ತಿಳಿಸಲಾಗುವುದು. ಆದಕಾರಣ, ವೈಯಕ್ತಿಕ ಗಮನಹರಿಸಿ, ತಮ್ಮ ಸಂಸ್ಥೆಗಳಿಂದ ಸಿದ್ಧಪಡಿಸಲಾಗಿರುವ ಅನುಪಾಲನಾ ವರದಿಯ ಪ್ರತಿಯನ್ನು ತ್ರಿ-ಪ್ರತಿಯಲ್ಲಿ ಅಗತ್ಯ ದಾಖಲೆಗಳೊಂದಿಗೆ ಈ ಇಲಾಖೆಗೆ ದಿನಾಂಕ: 25.06.2022ರೊಳಗೆ ಸಲ್ಲಿಸಲು ತಿಳಿಸಲಾಗಿದೆ. ಸದರಿ ವಿಷಯವು ಅತ್ಯಂತ ತುರ್ತು ಎಂದು ಭಾವಿಸುವುದು. ತಪ್ಪಿದಲ್ಲಿ ಹಾಗೂ ಸಮಂಜಸವಾದ ಉತ್ತರಗಳನ್ನು ಸಲ್ಲಿಸದಿದ್ದಲ್ಲಿ ಸಂಸ್ಥೆಯ ಮುಖ್ಯಸ್ಥರ ಹಾಗೂ ಬಟವಾಡೆ ಅಧಿಕಾರಿಗಳ ವೇತನವನ್ನು ತಡೆಹಿಡಿಯಲು ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಲಾಗಿದೆ. ಹಾಗೂ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಾಗುವುದೆಂದು ಸೂಚಿಸಲಾಗಿದೆ.

18/06/2022

ನಿರ್ದೇಶಕರು

**ಇವರುಗಳಿಗೆ:**

1. ರಾಜ್ಯದ ಎಲ್ಲಾ ಸರ್ಕಾರಿ/ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್ ಗಳು ಹಾಗೂ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಯ ಪ್ರಿನ್ಸಿಪಾಲರುಗಳಿಗೆ.
2. ಜಂಟಿ ನಿರ್ದೇಶಕರು (ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಜಂಟಿ ನಿರ್ದೇಶಕರು (ಪರೀಕ್ಷೆ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಜಂಟಿ ನಿರ್ದೇಶಕರು (ಯೋಜನೆ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಮಾನ್ಯ ಆಯುಕ್ತರ ಆಪ್ತಶಾಖೆ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ಮಾನ್ಯ ನಿರ್ದೇಶಕರ ಆಪ್ತಶಾಖೆ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ಆಡಳಿತಾಧಿಕಾರಿಯವರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
8. ಸಹಾಯಕ ನಿರ್ದೇಶಕರು, ಎಸಿಎಂ ಮತ್ತು ವಿದ್ಯಾರ್ಥಿ ವೇತನ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
9. ತಾಂತ್ರಿಕ ಸಹಾಯಕರು, ಕಟ್ಟಡ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
10. ರಿಜಿಸ್ಟ್ರಾರ್ (ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. (ಇವರ ಮುಖಾಂತರ ಸಿಬ್ಬಂದಿ ವಿಭಾಗಗಳಿಗೆ).
11. ಲೆಕ್ಕಾಧಿಕಾರಿಗಳು (ಬಿಯುಡಿ.), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
12. ಡಿಪಿ (1) ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. (ಆಡಳಿತಾಧಿಕಾರಿಯವರ ಮುಖಾಂತರ).
13. ಎಸ್.ಪಿ.ಎಸ್. ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. (ಆಡಳಿತಾಧಿಕಾರಿಯವರ ಮುಖಾಂತರ).
14. ಡಿಇಕ್ಯೂ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. (ಆಡಳಿತಾಧಿಕಾರಿಯವರ ಮುಖಾಂತರ).
15. ನಗದು ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.(ಆಡಳಿತಾಧಿಕಾರಿ ಮೂಲಕ)
16. ಉಗ್ರಾಣ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. (ಆಡಳಿತಾಧಿಕಾರಿಯವರ ಮುಖಾಂತರ).
17. ಆರ್‌ಐಪಿ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. (ಆಡಳಿತಾಧಿಕಾರಿಯವರ ಮುಖಾಂತರ).
18. ಸಾಂಖ್ಯಿಕ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. (ಆಡಳಿತಾಧಿಕಾರಿಯವರ ಮುಖಾಂತರ).
19. ಆರ್.ಇ.ಸಿ. ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. (ಆಡಳಿತಾಧಿಕಾರಿಯವರ ಮುಖಾಂತರ).
20. ಲೆಕ್ಕಪತ್ರ ಶಾಖೆ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. (ಆಡಳಿತಾಧಿಕಾರಿಯವರ ಮುಖಾಂತರ).
21. ಇ-ಆಡಳಿತ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇಲಾಖಾ ಜಾಲತಾಣದಲ್ಲಿ ಅಳವಡಿಸಲು ತಿಳಿಸಲಾಗಿದೆ
22. ಕಛೇರಿ ಪ್ರತಿ.